# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.

## MVC No.1681/2024

ಸಾಕ್ಷಿಯನ್ನು ದಿಃ 07.03.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಅರ್ಜಿಗಳ ಮೇಲಿನ ಆದೇಶದಂತೆ** ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್ ಎಸ್ ವಕೀಲರಿಂದಃ-

ನಾನು ಐಟಿಐ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು . ವರ್ಷಗಳಿಂದ ಲಾರಿ ಚಲಾಯಿಸುತ್ತಿದ್ದೇನೆ. ನನ್ನ ಬಳಿ ಭಾರಿ ವಾಹನ ಚಲಾಯಿಸುವ ಡಿಎಲ್ ಇದೆ. ದಿನಾಂಕಃ 10.02.2024 ರಂದು ಸಂಜೆ 4.30 ಗಂಟೆಗೆ ನಾನು ಕೆ ಎ 17 ಎ 8987 ರ ಲಾರಿಯನ್ನು ನಾನು ಚಲಾಯಿಸುತ್ತಿದ್ದೆ ಎಂದರೆ ಸರಿ. ಸದರಿ ವಾಹನ 6 ಚಕ್ರದ ವಾಹನವಾಗಿದೆ. ಸದರಿ ವಾಹನ 20 ಅಡಿ ಉದ್ದ ಇದೆ. ದಿನಾಂಕಃ 10.02.2024 ರಂದು ಸಂಜೆ 4.30 ಗಂಟೆಗೆ ಮೇಲೆ ಹೇಳಿದ ಲಾರಿಯನ್ನು ನಾನು ಹುಣಸೂರು ಕೆ ಆರ್ ನಗರ ಬೈಪಾಸ್ ರಸ್ತೆಯಲ್ಲಿರುವ ರಂಗನಾಥಬಡಾವಣೆಯ ಶ್ರೀ ಶನೇಶ್ವರ ದೇವಸ್ಥಾನದ ಹತ್ತಿರ ಚಾಲಯಿಸುತ್ತಿದ್ದೆ ಎಂದರೆ ಸರಿ. ಆ ಸಮಯದಲ್ಲಿ ಈ ಅರ್ಜಿಯ ಮೃತ ವ್ಯಕ್ತಿಯಾದ ಎಂ ಬಿ ಕೆಂಡಗಣ್ಣ ಸ್ವಾಮಿ ಬಿನ್ ಲೇಟ್ ಬಸಪ್ಪರವರು ಸುಜುಕಿ ಆಕ್ಸಿಸ್ 125 ನೋಂದಣಿ ಸಂಖ್ಯೆ ಕೆ ಎ 45 ವಿ 7011 ರಲ್ಲಿ ನನ್ನ ಲಾರಿಯ ಮುಂದೆ ರಸ್ತೆಯ ಎಡ ಭಾಗದಲ್ಲಿ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಅವರು ಆಗಲೇ ಬಿದ್ದಿದ್ದರು. ಸದರಿ ರಸ್ತೆ ಸದರಿ ಜಾಗದಲ್ಲಿ ಸ್ವಲ್ಪ ತಿರುವಿನಿಂದ ಕೂಡಿದೆ ಎಂದರೆ ಇಲ್ಲ. ನಾನು ಲಾರಿಯನ್ನು ಕೆ ಆರ್ ನಗರ ಕಡೆಯಿಂದ ಅತೀ ವೇಗವಾಗಿ ಚಲಾಯಿಸಿಕೊಂಡು ಬಂದು ರಸ್ತೆಯ ತಿರುವಿನಲ್ಲಿ ನಿಯಂತ್ರಣ ಮಾಡಲಾಗದೇ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದ ಕೆಂಡಗಣ್ಣ ಸ್ವಾಮಿಯವರ ಸ್ಕೂಟರ್ ಗೆ ಡಿಕ್ಕಿ ಪಡಿಸಿದೆ ಎಂದರೆ ಸರಿಯಲ್ಲ. ನಾನು ಆ ರೀತಿ ಡಿಕ್ಕಿ ಪಡಿಸಿದ ಪರಿಣಾಮ ಕೆಂಡಗಣ್ಣ ಸ್ವಾಮಿರವರು ರಸ್ತೆಗೆ ಬಿದ್ದರು ಎಂದರೆ ಸರಿಯಲ್ಲ. ಆ ರೀತಿ ನಾನು ಡಿಕ್ಕಿ ಪಡಿಸಿದ ಪರಿಣಾಮ ಅವರ ತಲೆ, ದೇಹದ ಎಡಭಾಗ , ಎಡ ಕೈ ಎಡ ಕಾಲಿಗೆ ಏಟಾಯಿತು ಎಂದರೆ ಸರಿಯಲ್ಲ. ನಾನು ಅವರನ್ನು ಉಪಚರಿಸಿ ಹುಣಸೂರು ಆಸ್ಪತ್ರೆಗೆ ದಾಖಲಿಸಿದೆ. ಅಲ್ಲಿಂದ ಅವರನ್ನು ಹೆಚ್ಚಿನ ಚಿಕಿತ್ಸೆಗೆ

ಮೈಸೂರಿನ ಜೆ ಎಸ್ ಎಸ್ ಆಸ್ಪತ್ರೆಗೆ ರೇಫರ್ ಮಾಡಲಾಯಿತು ಎಂದರೆ ಗೊತ್ತಿಲ್ಲ. ಅವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸುವ ಸಮಯದಲ್ಲಿ ಅವರಿಗೆ ಪ್ರಜ್ಞೆ ಇರಲಿಲ್ಲ ಎಂದರೆ ಸರಿ. ನಾನು ಅವರನ್ನು ಹುಣಸೂರಿನಿಂದ ಮೈಸೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಲಿಲ್ಲ. ಅವರು ದಿನಾಂಕಃ 10.02.2024 ರಿಂದ 22.02.2024 ರವರೆಗೆ ಜೆ ಎಸ್ ಎಸ್ ಆಸ್ಪತ್ರೆಯ ಐಸಿಯು ನಲ್ಲಿ ಪ್ರಜ್ಞೆ ಇಲ್ಲದೇ ಇದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಆಸ್ಪತ್ರೆಗೆ ಹೋಗಿ ಅವರಿಗೆ ಆರ್ಥಿಕ ಸಹಾ ಯವನ್ನು ಮಾಡಿಲ್ಲ ಮಾಲೀಕರು ಮಾಡಿದ್ದಾರೆ. ವಾಹನದ ಮಾಲೀಕರು ಆಸ್ಪತ್ರೆಗೆ ಹೋಗಿ ಅವರನ್ನು ನೋಡಿಲ್ಲ ಮತ್ತು ಹಣಕಾಸಿನ ಸಹಾಯ ಮಾಡಿಲ್ಲ ಎಂದರೆ ನೋಡಲು ಹೋಗಿದ್ದಾರೆ.

ಪೊಲೀಸರು ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಪ್ರಕರಣ ದಾಖಲಿಸಿ ಅಂತಿಮ ವರದಿಯನ್ನು ಸಲ್ಲಿಸಿ ಸಿ.ಸಿ.ನಂ.235/2024 ದಾಖಲಾಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಆರೋಪಿಯಾಗಿ ಇದೇ ನ್ಯಾಯಾಲಯದ ಮುಂದೆ ಹಾಜರಾಗುತ್ತಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು, ಪಿರ್ಯಾದುದಾರರು ಹಾಗೂ ಕೆಲವು ಸಾಕ್ಷಿದಾರರು ಪ್ರತಿಕೂಲ ಸಾಕ್ಷಿ ನುಡಿದು ನಾನು ಬಿಡುಗಡೆಗೊಂಡಿದ್ದೇನೆ ಎಂದರೆ ಸರಿ. ಅರ್ಜಿದಾರರು ಮೃತ ಕೆಂಡಗಣ್ಣ ಸ್ವಾಮಿರವರ ವಾರಸುದಾರರಾಗಿದ್ದರು ಎಂದರೆ ಗೊತ್ತಿಲ್ಲ. ಕೆಂಡಗಣ್ಣ ಸ್ವಾಮಿರವರು ಸರ್ವೆ ಇಲಾಖೆಯಲ್ಲಿ ಸೂಪರ್ ವೈಸರ್ ಆಗಿ ನಿವೃತ್ತಿ ಹೊಂದಿದ್ದು ಅವರಿಗೆ ಸಾಕಷ್ಟು ನಿವೃತ್ತಿ ವೇತನ ಬರುತ್ತಿತ್ತು ಮತ್ತು ಅವರು ಸ್ವಂತ ಜಮೀನನ್ನು ಹೊಂದಿ ತಿಂಗಳಿಗೆ ರೂ.60 ಸಾವಿರದಷ್ಟು ಸಂಪಾದನೆ ಹೊಂದಿದ್ದರು ಎಂದರೆ ಗೊತ್ತಿಲ್ಲ. ಅರ್ಜಿದಾರರು ಮೃತ ಕೆಂಡಗಣ್ಣ ಸ್ವಾಮಿರವರ ಅವಲಂಭಿತರಾಗಿದ್ದು , ಅವರ ಮರಣದಿಂದಾಗಿ ಅರ್ಜಿದಾರರಿಗೆ ತುಂಬಾಲಾರದ ನಷ್ಟ ಉಂಟಾಗಿದೆ ಎಂದರೆ ಗೊತ್ತಿಲ್ಲ. ಆದ್ದರಿಂದ ನಾನು ಕೂಡ ಅರ್ಜಿದಾರರಿಗೆ ಪರಿಹಾರ ನೀಡಲು ಬಾಧ್ಯಸ್ತನಾಗಿದ್ದೇನೆ ಎಂದರೆ ಸರಿಯಲ್ಲ.

ಆರ್.ಡಬ್ಲ್ಯೂಃ 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.